ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೊನ್ನಾಳಿ.

ಸಿ.ಸಿ. ನಂ. 1045/2020

ಪಿರ್ಯಾದುದಾರರು : ಹೊನ್ನಾಳಿ ಪೋಲಿಸ್ ಠಾಣೆ

ವಿರುದ್ಧ

ಆರೋಪಿ : 1. ನಾಗರಾಜ ಕೆ ಆರ್ ಬಿನ್ ರುದ್ರಯ್ಯ, 22 ವರ್ಷ
ವಾಸಃ ಸಂಕ್ಲೀಪುರ ಗ್ರಾಮ
ಹರಿಹರ ತಾಲ್ಲೂಕು.
2. ನಾಗಪ್ಪ ದಡ್ಡಿ **(Abated)**
3.ವೀರೇಶ್ ಕೆ ಆರ್ **(Plead guilty)**
4. ಹಾಲಸಿದ್ದಪ್ಪ ಎಸ್ **(Plead guilty)**

ಭಾ. ದಂ. ಪ್ರ. ಸಂ. ಕಲಂ. **313** ರನ್ವಯ **1** ನೇ ಆರೋಪಿಯ ಹೇಳಿಕೆ

ಪ್ರಶ್ನೆ 1: ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರ :

ಪ್ರಶ್ನೆ 2:ಪ್ರಾಸಾ.7 ಮುಸ್ತಾಫಾ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 01-03-2020 ರಂದು ಈ ಪ್ರಕರಣದ ಕಡತವನ್ನು ಚಾಸಾ-17 ರವರಿಗೆ ಪಡೆದುಕೊಂಡು ಅಲ್ಲಿಯವರೆಗೂ ಆದ ತನಿಖೆಯನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿ, ನಂತರ ಅದೇ ದಿನ ಮಲೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೋಗಿ ಮೃತ ಎಂ ಚಂದ್ರಶೇಖರಪ್ಪ ರವರ ಶವಪಂಚನಾಮೆಯನ್ನು ಮಾಡಲು ಚಾಸಾ-4 ಮತ್ತು 9 ರವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಚಾಸಾ-4 ಮತ್ತು 9 ರವರ ಸಮಕ್ಷಮ ಮೃತನ ರಕ್ತಸಂಬಂಧಿಕರಾದ ಚಾಸಾ-10, 11 ಮತ್ತು 12 ರವರ ಸಮಕ್ಷಮ ಶವಪಂಚನಾಮೆಯನ್ನು ಸಂಜೆ 04-30 ರಿಂದ 06-30 ಗಂಟೆ ಸಮಯದಲ್ಲಿ ಜರುಗಿಸಿ, ಛಾಯಾಚಿತ್ರಗಳನ್ನು ತೆಗೆದು ಚಾಸಾ-9, 10, 11 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ :

ಪ್ರಶ್ನೆ 3:ಪ್ರಾಸಾ. 7 ರವರು ಮುಂದುವರೆದು  ನಂತರ ಮೃತ ಎಂ ಚಂದ್ರಶೇಖರಪ್ಪನ ಶವಗಾವಲು ಮಾಡಲು ಚಾಸಾ-16 ರವರನ್ನು ನೇಮಕ ಮಾಡಿ ಮತ್ತು ಮೃತನ ಪಿ ಎಂ ವರದಿ ಆದ ನಂತರ ಚಾಸಾ-16 ರವರು ಮೃತ ದೇಹವನ್ನು ಅವರ ರಕ್ತ ಸಂಬಂಧಿಕರಿಗೆ ಹಸ್ತಾಂತರಿಸಿದ  ನಂತರ ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡು  ದಿಃ 02-03-2020 ರಂದು ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-5 ಮತ್ತು 6 ರವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಸ್ಥಳ ಮಹಜರ್ ಕ್ರಮವನ್ನು ಮದ್ಯಾಹ್ನ 02-00 ರಿಂದ 03-00 ಗಂಟೆ ಸಮಯದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ, ಕಚ್ಚಾ ನಕಾಶೆಯನ್ನು ತಯಾರಿಸಿ, ನಿಪಿ-10 ರಿಂದ 12 ಛಾಯಾಚಿತ್ರಗಳನ್ನು ತೆಗೆದ  ಬಗ್ಗೆ  ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ  ?

ಉತ್ತರ :

ಪ್ರಶ್ನೆ 4:ಪ್ರಾಸಾ. 7 ರವರು ಮುಂದುವರೆದು  ನಂತರ ಚಾಸಾ-5 ಮತ್ತು 6 ರವರಿಗೆ ನೋಟೀಸನ್ನು ಜಾರಿ ಮಾಡಿ ಅದೇ ದಿನ ಕೂಲಂಬಿ ಉಪ ಠಾಣೆಯ ಆವರಣದಲ್ಲಿ ಚಾಸಾ-5, 6 ಮತ್ತು 1 ರವರ ಸಮಕ್ಷಮ ಟ್ರ್ಯಾಕ್ಟರ್ ಇಂಜಿನ್ ನಂ.ಕೆಎ-17/ಟಿಬಿ-9599 ಮತ್ತು ಟ್ರೇಲರ್ ಮತ್ತು ಮೋಟಾರ್ ಸೈಕಲ್ ನಂ.ಕೆಎ-27/ಯು-7224 ಅನ್ನು ಅಮಾನತ್ತು ಪಡಿಸಿಕೊಂಡು ಅಮಾನತ್ತು ಮಹಜರ್ ಕ್ರಮವನ್ನು ಮದ್ಯಾಹ್ನ 03-30 ರಿಂದ 04-30 ಗಂಟೆ ಸಮಯದಲ್ಲಿ ಜರುಗಿಸಿ ನಿಪಿ-15 ರಿಂದ 20 ಛಾಯಾಚಿತ್ರಗಳನ್ನು ತೆಗೆದ  ಬಗ್ಗೆ  ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ  ?

ಉತ್ತರ :

ಪ್ರಶ್ನೆ 5:ಪ್ರಾಸಾ. 7 ರವರು ಮುಂದುವರೆದು  ಶವಪಂಚನಾಮೆ, ಸ್ಥಳ ಮತ್ತು ಅಮಾನತ್ತು ಮಹಜರ್ ಸಮಯದಲ್ಲಿ ಚಾಸಾ-16 ರವರು ಛಾಯಾಚಿತ್ರಗಳನ್ನು ತೆಗೆದು ಚಾಸಾ-5 ಮತ್ತು 6 ರವರ ಹೇಳಿಕೆಗಳನ್ನು ಪಡೆದುಕೊಂಡ  ನಂತರ ಕಡತವನ್ನು ಚಾಸಾ-19 ರವರಿಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿ  ಬಗ್ಗೆ  ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ  ?

ಉತ್ತರ :

ಪ್ರಶ್ನೆ 6:ಪ್ರಾಸಾ. 8 ದೇವರಾಜ್ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 02-03-2020 ರಂದು ಈ ಪ್ರಕರಣದ ಕಡತವನ್ನು ಚಾಸಾ-18 ರವರಿಂದ ಪಡೆದುಕೊಂಡು ಅಲ್ಲಿಯವರೆಗೂ ಆದ ತನಿಖೆಯನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿ, ನಂತರ ಅದೇ ದಿನ ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ, ನಂತರ ಚಾಸಾ-16 ರವರಿಂದ 65 ಬಿ ಪ್ರಮಾಣ ಪತ್ರವನ್ನು ಪಡೆದು ದಿಃ 12-03-2020 ರಂದು 2 ನೇ ಆರೋಪಿಯಾದ ನಿಮಗೆ ನೋಟೀಸನ್ನು ಜಾರಿ ಮಾಡಿ ಅವರಿಂದ ಪ್ರತ್ಯುತ್ತರವನ್ನು ಪಡೆದುಕೊಂಡಿದ್ದು ಸದರಿ ಪ್ರತ್ಯುತ್ತರದಲ್ಲಿ ಟ್ರ್ಯಾಕ್ಟರ್ ಇಂಜಿನ್ ಗೆ ವಿಮೆ ಇಲ್ಲದ ಕಾರಣ ಸ್ವತ್ತಿನ ಪಟ್ಟಿಯಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ ?

ಉತ್ತರ :

ಪ್ರಶ್ನೆ 7:ಪ್ರಾಸಾ. 8 ರವರು ಮುಂದುವರೆದು ನಂತರ ಚಾಸಾ-1 ರಿಂದ 3 ರವರ ಮರುಹೇಳಿಕೆಗಳನ್ನು ಪಡೆದುಕೊಂಡು, ದಿಃ 14-03-2020 ರಂದು 4 ನೇ ಆರೋಪಿಗೆ ನೋಟೀಸನ್ನು ಜಾರಿ ಮಾಡಿ ಅವರಿಂದ ಪ್ರತ್ಯುತ್ತರವನ್ನು ಮತ್ತು ನಷ್ಟಭರ್ತಿ ಮುಚ್ಚಳಿಕೆ ಪತ್ರವನ್ನು ಪಡೆದುಕೊಂಡು ಮೋಟಾರ್ ಸೈಕಲ್ ಅನ್ನು ಅವರ ವಶಕ್ಕೆ ಬಿಟ್ಟುಕೊಟ್ಟ ನಂತರ 1 ನೇ ಆರೋಪಿಯ ಸ್ವ ಇಚ್ಛೆಯಿಂದ ಠಾಣೆಗೆ ಹಾಜರಾಗಿದ್ದರಿಂದ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮವನ್ನು ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ ?

ಉತ್ತರ :

ಪ್ರಶ್ನೆ 8:ಪ್ರಾಸಾ. 8 ರವರು ಮುಂದುವರೆದು ದಿಃ 20-03-2020 ರಂದು ಚಾಸಾ-13 ರವರಿಂದ ಐಎಂ ವಿ ವರದಿಯನ್ನು ಸ್ವೀಕರಿಸಿ ಚಾಸಾ-15 ರವರಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು, ದಿಃ 06-05-2020 ರಂದು ಚಾಸಾ-14 ರವರಿಂದ ಮೃತನ ಪಿ ಎಂ ವರದಿಯನ್ನು ಸ್ವೀಕರಿಸಿ ದಿಃ 23-05-2020 ರಂದು 3 ನೇ ಆರೋಪಿಗೆ ನೋಟೀಸನ್ನು ಜಾರಿ ಮಾಡಿ ಅವರಿಂದ ಪ್ರತ್ಯುತ್ತರವನ್ನು ಪಡೆದುಕೊಂಡಿದ್ದು ಸದರಿ ಪ್ರತ್ಯುತ್ತರದಲ್ಲಿ ಟ್ರ್ಯಾಕ್ಟರ್ ಟ್ರೇಲರ್

ಗೆ ವಿಮೆ ಇಲ್ಲದ ಕಾರಣ ಸ್ವತ್ತಿನ ಪಟ್ಟಿಯಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳಲು ಇಚ್ಛಿಸುತ್ತೀರಿ ?

ಉತ್ತರ :

ಪ್ರಶ್ನೆ 9:ಪ್ರಾಸಾ. 8 ರವರು ಮುಂದುವರೆದು ದಿಃ 27-06-2020 ರಂದು ನ್ಯಾಯಾಲಯದ ಆದೇಶದಂತೆ ಟ್ರ್ಯಾಕ್ಟರ್ ಇಂಜಿನ್ ಅನ್ನು ಬಿಡುಗಡೆ ಮಾಡಲು ಚಾಸಾ-7 ಮತ್ತು 8 ರವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಚಾಸಾ-7 ಮತ್ತು 8 ರವರ ಸಮಕ್ಷಮ 2 ನೇ ಆರೋಪಿಗೆ ಬಿಟ್ಟುಕೊಟ್ಟು ಬಿಡುಗಡೆ ಮಹಜರ್ ಕ್ರಮವನ್ನು ಮದ್ಯಾಹ್ನ 12-00 ರಿಂದ 01-00 ಗಂಟೆ ಸಮಯದವರೆಗೆ ಜರುಗಿಸಿ ಛಾಯಾಚಿತ್ರಗಳನ್ನು ತೆಗೆದ ನಂತರ ತನಿಖೆಯಿಂದ ಆರೋಪಿತರ ವಿರುದ್ಧ ಆರೋಪ ಸಾಭೀತಾಗಿದ್ದರಿಂದ, ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳಲು ಇಚ್ಛಿಸುತ್ತೀರಿ ?

ಉತ್ತರ :

ಪ್ರಶ್ನೆ 10 : ನೀವು ಹೇಳುವುದು ಏನಾದರೂ ಇದೆಯೇ ?

ಉತ್ತರ : ಆ-1

ಪ್ರಶ್ನೆ 11: ನಿಮ್ಮ ಪರ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಳ್ಳುವಿರಾ ?

ಉತ್ತರ : ಆ-1

ಸಾಕ್ಷಿ ವಿಚಾರಣೆಯಲ್ಲಿ ಕಂಡು ಬಂದ ಅಂಶಗಳ ಸಂಕ್ಷಿಪ್ತ ವಿವರಗಳನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಹೇಳಿದಂತೆ ಉತ್ತರಗಳನ್ನು ಬರೆದುಕೊಳ್ಳಲಾಯಿತು ಎಂದು ದೃಢೀಕರಿಸುತ್ತೇನೆ .

ಸ್ಥಳ : ಹೊನ್ನಾಳಿ
ದಿನಾಂಕ : 02.04.2026.

(ದೇವದಾಸ್ ಹೆಚ್.)
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹೊನ್ನಾಳಿ.

Case called out, accused No.1 is present and his counsel filed an application under Sec.437(A) of Cr.P.C. Heard and perused the application and same is hereby allowed. Accused No.1 is directed to execute bond of Rs.20,000/- with one surety for like sum.

The Accused No.1 offer surety.

Surety by name K.g.Shantharaj S/o Gulappa K, 65 years, R/o: Kengalahalli village, Honnali taluk, Davanagere district, is present and offers himself stand as surety to accused No.1. He filed surety affidavit, declaration along with RTC extract bearing Sy.No.31/12 measuring to an extent of 1 acre 22 guntas and notarized copy of Aadhaar card .

Enquired the surety. Surety held sufficient. Hence, accepted. Office to take bond.

Statement of the accused U/s.313 of Cr.P.C. is recorded, the accused has denied the incriminating evidence. There is no defence evidence call on for arguments by:

PCJ.,Honnali